# 7

# ದೈವಿಕ ಮಾರ್ಗದರ್ಶನ, 1

ನಾವು ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸುತ್ತೇವೆ; ನಾವು ದೈವಿಕ ಮಾರ್ಗದರ್ಶನವನ್ನು ಹುಡುಕಬೇಕು. ಸಾಕ್ಷಿಗಳು ಸಂಶಯಾಸ್ಪದವಾದವುಗಳಾಗಿವೆ. ಅವು ಯಾವಾಗಲೂ ಏನು ಬಯಸಲ್ಪಟ್ಟದೆಯೋ ಅದರಂತೆ ಯಾವಾಗಲೂ ಇರುವದನ್ನು ನೀವು ಗಮನಿಸತಕ್ಕದ್ದು. ಸೋಲುಗಳು ಎಂದೂ ಸಾಕ್ಷಿಗಳಾಗಿರುವದಿಲ್ಲ. ಸಂಕೇತಗಳ ಬಗ್ಗೆ ಎಚ್ಚರಿಕೆಯಿಂದ ಇರಿ; ದೈವಿಕ ಮಾರ್ಗದರ್ಶನವು ಏನಾಗಿದೆಯೆಂದು ನೀವು ಯೋಚಿಸುವುದು ವೈಯಕ್ತಿಕ ಮಾನವ ಪ್ರಭಾವಗಳಾಗಿರಬಹುದು. ನಾವು ಪ್ರಾರ್ಥಿಸುತ್ತೇವೆ; ಆಗ ನಾವು ಕೇಳುತ್ತೇವೆ ಮತ್ತು ನೋಡುತ್ತೇವೆ. "ದೇವರೇ, ಅದನ್ನು ಕರಿಹಲಗೆಯ ಮೇಲೆ ಬರೆ - 'ಹೌದು' ಇಲ್ಲವೇ 'ಇಲ್ಲ' " ಎಂದು ಹೇಳುತ್ತೇವೆ. "ಹೌದು" ಇಲ್ಲವೇ "ಇಲ್ಲ" ಎಂದು ಅರಚುವುದು ದೇವರಿಗೆ ಸರಳವಾದದ್ದಾಗಿದೆ - ಆದರೆ ಇದು ಆತನ ಚಿತ್ತವಲ್ಲ. ಅದು "ಅನಂತರದ ದಿನದ ಪ್ರಕಟನೆಯ" ಪೆಟ್ಟಾಗಿರುವುದು. ಆತನು ನಮಗೆ "ಹೌದು" ಇಲ್ಲವೇ "ಇಲ್ಲ" ಎಂದು ಹೇಳಿದರೆ, ಆಗ ಅದಕ್ಕೆ ಇದ್ದಂತೆಯೇ ವಿಧೇಯರಾಗದೇ ಇರುವುದು ಪಾಪವಾಗಿದೆ. ಕೀರ್ತನೆ 143:10 ಮತ್ತು ಯೋಹಾನ 7:17 ದೇವರ ಚಿತ್ತವನ್ನು ನಾವು ತಿಳಿಯುವದಷ್ಟೇ ಅಲ್ಲ, ನಾವು ಅದನ್ನು *ಮಾಡಬೇಕೆಂದು* ಪ್ರಕಟಿಸುತ್ತವೆ. ನಮ್ಮಲ್ಲಿ ಅನೇಕರು *ತಿಳಿಯಲಿಕ್ಕೆ* ಮಾತ್ರ ಪ್ರಾರ್ಥಿಸುತ್ತೇವೆ. ಒಬ್ಬನು ಜ್ಞಾನಕ್ಕಾಗಿ ಪ್ರಾರ್ಥಿಸುತ್ತಾನೆ. ಸತ್ಯಕ್ಕಾಗಿ ಒಬ್ಬನು ಬೈಬಲನ್ನು ಓದುತ್ತಾನೆ. "ಕರ್ತನು ನನಗೆ ಮಾತಾಡಿದನು" ಎಂದು ಹೇಳುವುದು ಪಾಷಂಡಿಯಾಗಿದೆ. ಅವನು ಅದನ್ನು ಇನ್ನು ಮುಂದೆ ಮಾಡುವುದೇ ಇಲ್ಲ! "ಇದನ್ನು ಇಲ್ಲವೇ ಅದನ್ನು ಮಾಡಲು ಕರ್ತನು ನನಗೆ ಹೇಳಿದನು" ಎಂದು ಹೇಳುವುದು ಬಾಲಿಶ ಭಾವದ ಊಹನೆಯಾಗಿದೆ. ದೇವರ ಚಿತ್ತವನ್ನು ಇಲ್ಲವೇ ದೇವರ ವಾಕ್ಯವನ್ನು ಕರ್ತೃಸಂಬಂಧದ ಪ್ರಭಾವಗಳಿಂದ ಹುಡುಕುತ್ತೇವೆ ಎಂದು ಸೂಚಿಸಲು ಪರಿಶುದ್ಧ ಬರಹಗಳಲ್ಲಿ ಯಾವುದೂ ಧೈರ್ಯಗೊಳ್ಳುವದಿಲ್ಲ. ದೇವ ಸ್ಥಬ್ಧವಾದ, "ಚಿಕ್ಕಧ್ವನಿ" ಅಲ್ಲಿರುವದಿಲ್ಲ. ಆಂತರ್ಯದ ಪ್ರಭಾವಗಳು ಪ್ರಕಟನೆಗಳಾಗಿರುವದಿಲ್ಲ. ದೈವಿಕ ಪ್ರಕಟನೆಗೆ ಭಾವನೆಗಳನ್ನು ಎಬ್ಬಿಸುವುದು ಕಣಿ ಹೇಳುವದರೊಂದಿಗೆ ವಿಲಾಸಿಸುವುದಾಗಿದೆ. ಪರಿಶುದ್ಧ ಬರಹಗಳೊಂದಿಗಿನ ಮನುಷ್ಯನು ಅನುಭವದೊಂದಿಗಿರುವ ಮನುಷ್ಯನೊಂದಿಗೆ ಎಂದಿಗೂ ಸಪರ್ಥಿಸಲಾರನು.

ದೇವರು ಸರ್ವಸ್ವತಂತ್ರನು ... ಮನುಷ್ಯರಿಗೆ ಸ್ವತಂತ್ರವಾದ - ನೈತಿಕ ಕಾರ್ಯಭಾರವಿರುವುದು. ದೇವರು ತನ್ನ ಸಾರ್ವಭೌಮತೆಯನ್ನು ಇಲ್ಲದೇ ಮನುಷ್ಯನ ಆಯ್ಕೆಯ ಸ್ವಾತಂತ್ರ್ಯವನ್ನು ಅತಿಕ್ರಮಿಸುವದಿಲ್ಲ. ದೇವರು ನಮಗೆ ರೊಟ್ಟಿಯನ್ನು ಕೊಡುತ್ತಾನೆ, ಆದರೆ ಆತನು ಅದನ್ನು ತುಂಡುಮಾಡಿ, ಬೆಣ್ಣೆ ಹಚ್ಚಿ ನಮ್ಮ ಮೇಜಿನ ಮೇಲೆ ಅದ್ಭುತಕರವಾಗಿ ಇಡುವದಿಲ್ಲ. ಮನುಷ್ಯನು ಪ್ರಾರ್ಥನೆಗೆ ಉತ್ತರ ಕೊಡುವಂತೆಯೇ ದೇವರು ಪ್ರಾರ್ಥನೆಗೆ ಉತ್ತರ ಕೊಡುತ್ತಾನೆ. ನೀವು ಕೆಲಸ ಮಾಡಲು ಸಿದ್ಧರಾಗಿರದೇ ಇರುವ ಯಾವುದಕ್ಕಾಗಿಯೂ ಪ್ರಾರ್ಥಿಸಬೇಡಿರಿ. ನಾವು ಉತ್ತರಕೊಡದೇ ಇರುವಾಗ ದೇವರು ಯಾಕೆ ಉತ್ತರಕೊಡಬೇಕು? ನೀವು ಅದರಲ್ಲಿ ನಂಬಿಕೆ ಇಡದಿದ್ದರೆ, ಅದಕ್ಕಾಗಿ ಪ್ರಾರ್ಥಿಸುವದನ್ನು ನಿಲ್ಲಿಸಿಬಿಡಿರಿ. ಪ್ರಾರ್ಥನೆಯು ಪ್ರಬುದ್ಧತೆಯನ್ನು ಮತ್ತು ಪ್ರೌಢ ಜವಾಬ್ದಾರಿಕೆಯನ್ನು ಒಳಗೊಂಡಿರುತ್ತದೆ. "ಮನುಷ್ಯರಂತೆ ವರ್ತಿಸಿರಿ" ಎಂದು

ದೇವರು ನಮಗೆ ಹೇಳುತ್ತಾನೆ.

ಪ್ರಾರ್ಥನೆಯು ಉತ್ತರಗಳು ಗುಣಲಕ್ಷಣದಿಂದ ಬರುತ್ತವೆ. "ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ. ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಕೊಳ್ಳಬೇಕು" (ಯಾಕೋಬ 1:5, 6ಎ); "ಆದರೆ ಮೇಲಣಿಂದ ಬರುವ ಜ್ಞಾನವು ಮೊದಲು ಪರಿಶುದ್ಧ ವಾದದ್ದು, ಆ ಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊಳ್ಳುವಂಥದು, ಕರುಣೆ ಮುಂತಾದ ಒಳ್ಳೇ ಫಲಗಳಿಂದ ತುಂಬಿರುವಂಥದು ಆಗಿದೆ; ಅದರಲ್ಲಿ ಚಂಚಲವೂ ಕಪಟವೂ ಇಲ್ಲ" (ಯಾಕೋಬ 3:17) ಎಂದು ನಮಗೆ ಹೇಳಲ್ಪಟ್ಟಿದೆ. ನಾವು ಜ್ಞಾನಕ್ಕಾಗಿ ಪ್ರಾರ್ಥಿಸುದಿಲ್ಲ. ದೇವರು ನಮ್ಮ IQಗಳನ್ನು ಎಬ್ಬಿಸುವದಿಲ್ಲ. ಪ್ರಾರ್ಥನೆಯು ನಮ್ಮನ್ನು ಜಾಣರನ್ನಾಗಿ ಮಾಡುವದಿಲ್ಲ, ಆದರೆ ದಯೆಯುಳ್ಳ ವರನ್ನಾಗಿ ಮಾಡುತ್ತದೆ. ಬುದ್ಧಿವಂತಿಕೆಯನ್ನು ಬಿಟ್ಟು ದೇವರು ನಮಗೆ ವಿಶೇಷ ವಾದ ಉತ್ತರಗಳನ್ನು ಕೊಡುವದಿಲ್ಲ ... ಆದರೆ ಪ್ರಾರ್ಥನೆಯಿಂದ ಜ್ಞನವು ಗುಣಲಕ್ಷಣ ವಾಗಿದೆ! ಪರಿಶುದ್ಧತೆಯು ಒಬ್ಬನನ್ನು ದೇವರ ಚಿತ್ತದಲ್ಲಿ ಇಡುತ್ತದೆ. ದೇವರು ನಮ್ಮನ್ನು ಗುಣಲಕ್ಷಣದ ಬಲದಿಂದ ನಡಿಸುತ್ತಾನೆ. ನಾವು ಉತ್ತರಗಳನ್ನು ಬಯಸುತ್ತೇವೆ! ದೇವರು ಪ್ರಬುದ್ಧತೆಯ ಆತ್ಮಿಕತೆಯನ್ನು ಬಯಸುತ್ತಾನೆ. ಪರಿಶುದ್ಧ ಬರಹಗ ಳನ್ನು ನಮ್ಮ ಹೃದಯ ಗಳಲ್ಲಿ ನಾವು ಅಡಗಿಸಿಟ್ಟುಕೊಳ್ಳಬೇಕು ಮತ್ತು ಪರಿಶುದ್ಧಾತ್ಮನಿಂದ ತುಂಬಲ್ಪಡಬೇಕು. ನಮಗೆ ಕ್ರಿಸ್ತನ ಮನಸ್ಸಿನ ಅಗತ್ಯತೆಯಿದೆ. ಶಿರಸ್ಸಿನ ತನಕ ನಾವು ಬೆಳೆಯುತ್ತಿರುವೆವು. ಹಾಲಿನಿಂದ ಗಟ್ಟಿ ಆಹಾರಕ್ಕೆ, ವಿವೇಚನೆಗೆ ಹೋಗುತ್ತೇವೆ.

ದೇವರು ಪರಿಸ್ಥಿತಿಗಳನ್ನು ನಿಯಂತ್ರಿಸುತ್ತಾನೆ. ಸೈತಾನನು ಆತಂಕವೊಡ್ಡುತ್ತಾನೆ. ಪೌಲನು ಭಿನ್ನತೆಯನ್ನು ತಿಳಿದಿದ್ದನು; ನಾನು ತಿಳಿದಿರುವದಿಲ್ಲ. ದೇವರು ಪರಿಸರಗ ಳಲ್ಲಿ ಕಾರ್ಯಮಾಡುತ್ತಾನೆ. ಆತನು ನಮಗೆ ಬಾಗಿಲುಗಳನ್ನು ತೆರೆಯುತ್ತಾನೆ ಮತ್ತು ಮುಚ್ಚುತ್ತಾನೆ. ನಾವು ಅದಕ್ಕೆ ಒಪ್ಪಿಕೊಳ್ಳತಕ್ಕದ್ದು. ನಮ್ಮ ಮುಖಗಳಲ್ಲಿ ಆತನು ಬಾಗಿಲುಗ ಳನ್ನು ಅಪ್ಪಳಿಸುವಾಗಲೂ, ಇನ್ನೂ ದೇವರು ನಮಗಿರುತ್ತಾನೆ, ನಾವು ಬಹಳವಾಗಿ ಶೋಧಿ ಸಲ್ಪಡಲಿಕ್ಕೆ ದೇವರು ನಮ್ಮನ್ನು ಬಿಡುವದಿಲ್ಲ (1 ಕೊರಿಂಥ 10:13). ತಪ್ಪಿಸಿಕೊಳ್ಳುವ ಒಂದು ಮಾರ್ಗವನ್ನು ಆತನು ಒದಗಿಸುವನು. ಹೀಗಿದ್ದರೂ, ನಮ್ಮ ನಡತೆಗೆ ನಾವು ಜವಾಬ್ದಾರರಾಗಿದ್ದೇವೆ. ದೇವರು ನಮ್ಮನ್ನು ಕೆಡುಕನಿಂದ ದೂರ ಇಡುವನು (ಮತ್ತಾಯ 6). ಬೈಬಲಿನ ಜ್ಞಾನವು ನಮ್ಮ ಎಲ್ಲಾ ತೀರ್ಮಾನಗಳ ಗುರುತಾಗಿರುವುದು. ಆತ್ಮನಿಂದ ತುಂಬಿಸಲ್ಪಡುವುದು ವಿವೇಚನೆಯಿಂದಿರುವುದಾಗಿದೆ (ಇಬ್ರಿಯ 5:12-14; ಎಫೆಸ 5:18; ಕೊಲೊಸ್ಸೆ 3:16). ಮನುಷ್ಯನು ದೇವರಿಗೆ ಸಮರ್ಪಿಸಿಕೊಳ್ಳುತ್ತಾನೆ, ಮತ್ತು ಬೆಳಕುಗಳಿಲ್ಲದೇ ದೇವರನ್ನು ನೋಡುವುದು ಸುಲಭ; ನಮ್ಮ ತಲೆಯ ಬೆಳಕುಗಳಿಂದ ಆತನನ್ನು ನೋಡುವುದು ಕಠಿಣವಾಗಿರುತ್ತದೆ. ಪುನಃ, ಎಚ್ಚರಿಕೆ ಹೊಂದಿಕೊಳ್ಳಿರಿ - ಭಾವನೆಗಳಬಗ್ಗೆ ಎಚ್ಚರಿಕೆಯಿಂದ ಇರ್ರಿ: "ಹೃದಯವು ಎಲ್ಲಕ್ಕಿಂತಲೂ ವಂಚಕ; ಗುಣವಾಗದ ರೋಗಕ್ಕೆ ಒಳಗಾಗಿದೆ; ಅದನ್ನು ಯಾರು ತಿಳಿದಾರು?" (ಯೆರೆಮೀಯ 17:9).

ನಾವು ಪ್ರಾರ್ಥನೆಯಲ್ಲಿ ಹೋರಾಡುತ್ತೇವೆ; ನಾವು ಪ್ರಾರ್ಥನೆಯಲ್ಲಿ ಬೆಳೆಯುತ್ತೇವೆ; ನಾವು ಪ್ರಾರ್ಥನೆಯಲ್ಲಿ ಎಡೆಬಿಡದೆ ಹೋರಾಡುತ್ತೇವೆ. ಪ್ರಾರ್ಥಿಸುವವರೆಗೆ ನೀವು ಪ್ರಾರ್ಥಿಸಿರಿ! ನಿಮಗೆ ಒಳ್ಳೆಯದನ್ನು ಮಾಡುವವರೆಗೆ ಪ್ರಾರ್ಥಿಸಿರಿ. ದೇವರು "ಸಮಸ್ಯೆಯನ್ನು ಪರಿಹರಿಸುವವನಲ್ಲ," "ಪೂರೈಸುವವನ ಅಗತ್ಯತೆ" ಉಳ್ಳವನು, ಆತನು "ಆಕಾಶದಲ್ಲಿ

ಅಗತ್ಯತೆಯನ್ನು ಅಳೆಯುವವನಲ್ಲ.'' ನಮ್ಮನ್ನು ಬದಲಾಯಿಸಲು ಆತನು ಬರುತ್ತಾನೆ. ನಾವು ಹೆಚ್ಚು ಉತ್ತಮ ವ್ಯಕ್ತಿಯಂತೆ ಪ್ರಾರ್ಥನೆಯನ್ನು ಮುಗಿಸುವಾಗ, ಪ್ರಾರ್ಥನೆಯು ಉತ್ತರಿಸಲ್ಪಡುತ್ತದೆ. ಪ್ರಾರ್ಥನೆಯ ಉತ್ತರಗಳ ಬಗ್ಗೆ ಬಹಳ ಒತ್ತಾಯ ಮಾಡುವವರಾಗ ಬೇಡಿರಿ; ಪ್ರಾರ್ಥನೆಯ ಉತ್ತರಗಳೊಂದಿಗೆ ಬಹಳ ಕಠಿಣರಾಗಬೇಡಿರಿ.

◇◇◇◇◇◇◇◇

# ಪ್ರಾರ್ಥನೆಯಲ್ಲಿ ಶಿಸ್ತು

## ಮತ್ತಾಯ 17:14-21

*"ಆದರೆ ಈ ಜಾತಿಯು ಪ್ರಾರ್ಥನೆ ಮತ್ತು ಉಪವಾಸದಿಂದ ಹೊರತು ಬೇರೆ ಯಾವುದರಿಂದಲೂ ಬಿಟ್ಟು ಹೋಗುವುದಿಲ್ಲ'' (ಮತ್ತಾಯ 17:21).*

*ಕೆಲವೊಂದು ಸಂಗತಿಗಳು ಅಗಾಧವಾದ ಪ್ರಾರ್ಥನೆ ಮತ್ತು ಉಪವಾಸದಿಂದ ಮಾತ್ರವೇ ಬರುತ್ತದೆ!* ಬಾಧಿಸಲ್ಪಟ್ಟ ತಂದೆಯು ದೆವ್ವದಿಂದ ಹಿಡಿಯಲ್ಪಟ್ಟ ತನ್ನ ಹುಚ್ಚ ಮಗನೊಂದಿಗೆ ಯೇಸುವಿನ ಬಳಿಗೆ ಬಂದನು. ಮೊದಲು ಅವನು ಶಿಷ್ಯರ ಬಳಿಗೆ ಬಂದಿದ್ದನು, ಆದರೆ ಅವರು ಸೋತುಹೋಗಿದ್ದರು. ಯೇಸುವು ಮಹಾ ಪ್ರಯತ್ನದಿಂದ ಸೋತುಹೋಗಲಿಲ್ಲ! ಶಿಷ್ಯರು ಪ್ರಾರ್ಥಿಸುವದನ್ನು ಮತ್ತು ಉಪವಾಸ ಮಾಡುವದನ್ನು ಕಡೆಗಣಿಸಿದ್ದರಿಂದ ಅವರು ಸೋತು ಹೋದರೆಂದು ಯೇಸು ಹೇಳಿದನು. ಇದು ಪ್ರಾರ್ಥನೆಯಲ್ಲಿ ಇನ್ನೊಂದು ಸಮಸ್ಯೆಯನ್ನು ಪರಿಚಯಿಸುತ್ತದೆ. ಶಿಷ್ಯರು ಮೊದಲು ಯಶಸ್ವಿಯಾಗಿ ಗುಣಪಡಿಸಿದ್ದರು. ಅವರು ಇತರ ಸಮಸ್ಯೆಗಳನ್ನು ಬಗೆಹರಿಸಿದ್ದರು. ಗಂಭೀರವಾದ ವಿಷಯಗಳು ಹೆಚ್ಚಾದದ್ದನ್ನು ಕೇಳುತ್ತವೆ! ಗಂಭೀರವಾದ ವಿಷಯಗಳು ಪ್ರಾರ್ಥನೆಯನ್ನೂ, ಉಪವಾಸ ಮಾಡುವದನ್ನೂ ಕೇಳುತ್ತವೆ. "ನಾನು ಪ್ರಾರ್ಥನೆಯನ್ನು ಪ್ರಯತ್ನಿಸಿದೆನು, ಅದು ಕಾರ್ಯಮಾಡಲಿಲ್ಲ!'' ಹಾಗೆ ಮಾಡಿದಿರೋ? ನೀವು ನಿಜವಾಗಿಯೂ ಪ್ರಾರ್ಥಿಸಿದಿರೋ? ನೀವು ಉಪವಾಸ ಮಾಡಿದಿರೋ? ನೀವು ನಂಬಿಕೆಯಿಲ್ಲದವರಾಗಿರುವಿರೋ? "ಬೇಡಿಕೊಳ್ಳಿರಿ ... ಹುಡುಕಿರಿ ... ತಟ್ಟಿರಿ!'' ಎಂದು ಯೇಸು ಹೇಳಿದನು! ಬುದ್ಧಿವಾದ ಹೇಳುವದರಲ್ಲಿ ನನ್ನ ಮೊದಲನೆಯ ಪ್ರಶ್ನೆಯು ಹೀಗಿರುತ್ತದೆ: "ಅದರ ಬಗ್ಗೆ ನೀವು ಪ್ರಾರ್ಥಿಸಿರುವಿರೋ?'' ಎಂಬುದು. ಬಹು ಸ್ವಲ್ಪ ಜನರು ಪ್ರಾರ್ಥಿಸುವುದು ದುಃಖಕರವಾದ ಸಂಗತಿಯಾಗಿದೆ. ಯಾರೂ ಎಂದೂ ಉಪವಾಸ ಮಾಡಲಿಲ್ಲ. ನೀನು ಉಪವಾಸ ಮಾಡಿದ್ದೀಯೋ? ನೀನು ಉಪವಾಸ ಮಾಡುವಿಯೋ?

ಪ್ರತೀಕಾರದೊಂದಿಗೆ ಆತ್ಮಿಕತೆಯು ಇಂದು ಹಿಂದಿರುಗಿ ಬಂದಿರುವುದು, ಆದರೆ ಅದು ಬೈಬಲಿನ ಆತ್ಮಿಕತೆಯಾಗಿರುವದಿಲ್ಲ. ಅದು ಬಾಲಿಶವಾದದ್ದು, ಮಾತುಗಾರಿಕೆಯದು, ಮತ್ತು ಸ್ವಾರ್ಥತೆಯುಳ್ಳದ್ದು ಆಗಿರುತ್ತದೆ. ಜನರು ದೇವರನ್ನು "ಭಾವಿಸುವುದರಲ್ಲಿ'' ಆಸಕ್ತರಾಗಿದ್ದಾರೆ ಆದರೆ "ದೇವರನ್ನು ತಿಳಿಯುವದರಲ್ಲಿ'' ಅಲ್ಲ. "ಪ್ರಾರ್ಥಿಸಿರಿ ಮತ್ತು ನೀವು ಏನನ್ನು ಪಡೆಯಲು ಬಯಸುವಿರೋ ಅದನ್ನು ದೇವರಿಗೆ ಹೇಳಿರಿ'' ಎಂದು ಟೆಲಿವಿಶನ್ ಪ್ರಸಂಗಿಗಳು ನಮಗೆ ಹೇಳುತ್ತಾರೆ. ಇದು ಹುಚ್ಚುತನವಾಗಿದೆ. ದೇವರು ಪ್ರಾರ್ಥನೆಗೆ ಒತ್ತೆಯಾಳಾಗಿರುವದಿಲ್ಲ. ದೇವರಿಗೆ ಯಾವ ಮನುಷ್ಯನೂ ಆಜ್ಞೆ

ಮಾಡಲಾರನು. ದೇವರು ಯಾರ ಹಂಗಿನಲ್ಲಿಯೂ ಇರುವದಿಲ್ಲ. ಸುಮ್ಮನೇ ಕೇಳುವುದು ಮತ್ತು ಸ್ವೀಕರಿಸುವುದು ಯಾಂತ್ರಿಕವಾದದ್ದಾಗಿದೆ. ಪ್ರಾರ್ಥನೆಯು ಒಂದು ಧಾರ್ಮಿಕ ಸ್ವಾರ್ಥದ ಯಾತ್ರೆಯಾಗಿರುವದಿಲ್ಲ. ಪ್ರಾರ್ಥನೆಯು ಒಪ್ಪಿಸಿಕೊಡುವಿಕೆಯಾಗಿದೆ, ಮೂಢನಂಬಿಕೆಯಾಗಿರುವದಿಲ್ಲ. ಆತ್ಮಿಕತೆಯು ಪರಿಶುದ್ಧಬರಹಗಳೊಂದಿಗೆ ಮತ್ತು ವಿವೇಚನೆಯೊಂದಿಗೆ ಸಂಬಂಧಿಸಲ್ಪಡತಕ್ಕದ್ದು. ಇಂದು ಶಿಷ್ಯತ್ವವು ಹೊರಗಿದ್ದು, ಆಟವು ಒಳಗಿರುತ್ತದೆ. ಪ್ರಾರ್ಥನೆಯು ಕೆಲಸವಾಗಿದೆ ಆದರೆ ತಮಾಷೆಯಾಗಿರುವದಿಲ್ಲ. ಅಪೊಸ್ತಲರು *ತಾವು* ಬಲವಾಗಿದ್ದೇವೆಂದು ಯೋಚಿಸಿದ್ದರಿಂದ ಸೋತು ಹೋದರು. ದೇವರ ಬಲವು ತಮಗಿದೆ ಎಂದು ತಿಳಿದುಕೊಂಡರು; ತಮ್ಮ ಸ್ವಂತ ಸಹಾನುಭೂತಿ ಮತ್ತು ತ್ಯಾಗವನ್ನು ಒಳಪಡಿಸುವಲ್ಲಿ ಸೋತುಹೋದರು.

ಜೀವನದಲ್ಲಿಯ ಉಳಿದೆಲ್ಲದರಂತೆ, ಪ್ರಾರ್ಥನೆಯು ಶಿಸ್ತನ್ನು ಕೇಳುತ್ತದೆ. “ಶಿಸ್ತುಕ್ರಮವಿಲ್ಲದ ಪ್ರಾರ್ಥನೆಯು ಸೋತು ಹೋಗುತ್ತದೆ” ಎಂದು ಯೇಸುವು ಹೇಳಿದನು. ಒಂದು ವಾದ್ಯಗೋಷ್ಠಿಯ ಪಿಯಾನೋ ಬಾರಿಸುವವನು 50,000 ತಾಸುಗಳ ವರೆಗೆ ಪ್ರಾಕ್ಟೀಸ್ ಮಾಡಿದ್ದನು. ಇದು ಪ್ರತಿದಿನ 8 ತಾಸುಗಳಂತೆ 6,250 ದಿನಗಳಾಗಿತ್ತು (17 ವರ್ಷಗಳು ಮತ್ತು 45 ದಿನಗಳು). ಈ ದೊಡ್ಡ ಪಿಯಾನಿಸ್ಟನಿಗೆ, ಪಾಡೆರೆವಸ್ಕಿಗೆ, ಒಬ್ಬ ಮಹಿಳೆಯು “ಅದರಂತೆ ಬಾರಿಸಲು ನಾನು ನನ್ನ ಜೀವಿತವನ್ನೇ ಕೊಡುವೆನು” ಎಂದು ಉದ್ಗರಿಸಿದಳು, “ನಾನು ಅದನ್ನೇ ಮಾಡಿದ್ದೇನೆ”[1] ಎಂದು ಅವನು ಉತ್ತರಕೊಟ್ಟನು. ಅದರಂತೆಯೇ, ಪ್ರಾರ್ಥನೆಯು ಸಮಯವನ್ನು, ಪ್ರಯತ್ನವನ್ನು, ರೂಢಿಸುವದನ್ನು ಮತ್ತು ತ್ಯಾಗವನ್ನು ಕೇಳುತ್ತದೆ.

## ಪ್ರಾರ್ಥನೆಯು ಸ್ವಯಂ ಸೂಚನೆಯನ್ನು ಒಳಗೊಂಡಿರುತ್ತದೆ[2]

ದೇವರು ಪ್ರಾರ್ಥನೆಗಳಿಗೆ ಉತ್ತರ ಕೊಡುತ್ತಾನೆ. ಆಸ್ತಿಕವಾದವು ಪಾಖಂಡಮತ ವಾಗಿದೆ. ಆಸ್ತಿಕವಾದವು ಸುಳ್ಳು ತತ್ವಜ್ಞಾನವಾಗಿದ್ದು ದೇವರು ಜಗತ್ತನ್ನು ಸುಮ್ಮನೇ ಬಿಟ್ಟುಬಿಡಲು ಸೃಷ್ಟಿಸಿದನೆಂದು ಹೇಳುತ್ತದೆ. ಆತನು ಚರಿತ್ರೆಯ ಮಾನವರಂಗದ ಕಾರ್ಯಮಾಡಲಾರನು, ನಮ್ಮ ಜೀವಿತಗಳೊಳಗೆ ಪ್ರವೇಶಿಸಲು ಆತನು ಸಹಾಯ ಹೀನನಾಗಿದ್ದಾನೆ ಎಂದು ಅದು ಸೂಚಿಸುತ್ತದೆ. ಇಂದು ದೇವರು ಕಾರ್ಯಮಾಡುವದಿಲ್ಲ ವೆಂದು ನಂಬುವ ಸಹೋದರರು ಪ್ರಾರ್ಥನೆಯನ್ನು ಒಂದು ಆಜ್ಞೆಗೆ ಮತ್ತು ಸ್ವಯಂ ಪ್ರಚೋದನೆಗೆ ಕೆಳಗಿಳಿಸುತ್ತಾರೆ. ಆಸ್ತಿಕವಾದವು ಸೋತುಹೋಗುತ್ತದೆ! ದೇವರು ಸೋತು ಹೋಗುವದಿಲ್ಲ! ದೇವರು ನಿಜವಾಗಿರುತ್ತಾನೆ, ಸಜೀವಿಯಾಗಿದ್ದಾನೆ. ದೊಡ್ಡ ಗ್ರಹವಾದ ಭೂಮಿಯ ಮೇಲೆ ಕಾರ್ಯಮಾಡುತ್ತಾನೆ. ದೇವರು ನಮ್ಮ ಜೀವಿತಗಳಲ್ಲಿ ಕಾರ್ಯಮಾಡುತ್ತಾನೆ. ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಉತ್ತರ ಕೊಡುತ್ತಾನೆ. ಇದು ನಮ್ಮ ನಂಬಿಕೆಯಾಗಿದೆ!

ಪ್ರಾರ್ಥನೆಯು ಸ್ವಯಂ - ಸೂಚನೆಯಾಗಿರುವದಿಲ್ಲ, ಹೀಗಿದ್ದರೂ ಸ್ವಯಂ - ಸೂಚನೆಯು ಪ್ರಾರ್ಥನೆಯ ಒಂದು ದೊಡ್ಡ ಭಾಗವಾಗಿರುವುದು. ನಮ್ಮ ಪ್ರಾರ್ಥನೆಗಳು ನಮ್ಮನ್ನು ಬದಲಾಯಿಸದಿದ್ದರೆ, ಅವು ಯಾಕೆ ದೇವರನ್ನು ಬದಲಾಯಿಸಬೇಕು? ಪ್ರಾರ್ಥನೆಯು ನಮ್ಮನ್ನು ಬದಲಾಯಿಸುವುದರಿಂದ, ಪ್ರಾರ್ಥನೆಯು ಪ್ರಾಥಮಿಕವಾಗಿ ಪರಿಸ್ಥಿತಿಗಳನ್ನು ಬದಲಾಯಿಸುತ್ತದೆ. ನಾವು ಯಾಕೆ ಹೆಚ್ಚು ಪ್ರಾರ್ಥಿಸಬಾರದು? ನಾನು ಬಹಳವಾಗಿ ಪ್ರಸಂಗಿಸಿದ್ದೇನೆ ಮತ್ತು ಸ್ವಲ್ಪವಾಗಿ ಪ್ರಾರ್ಥಿಸಿದ್ದೇನೆ. ಪ್ರಾರ್ಥನೆಯಲ್ಲಿಯಕ್ಕಿಂತ ಹೆಚ್ಚಾಗಿ ಪ್ರಸಂಗಿಸುವದರಲ್ಲಿ ನಾನು ಹೆಚ್ಚು ಶಿಕ್ಷಿತನಾಗಿದ್ದೇನೆಂದು ಅರ್ಥವಾಗುತ್ತದೆ. ಪ್ರಾರ್ಥಿಸುವದಕ್ಕಿಂತ ಹೆಚ್ಚಾಗಿ ಓದುವದರಲ್ಲಿ

ನಾನು ಹೆಚ್ಚು ಸಮಯವನ್ನು ಕಳೆದಿದ್ದೇನೆ. ನಾನು ಸಾವಿರಾರು ಪುಸ್ತಕಗಳನ್ನು ಓದಿದ್ದೇನೆ. ಪ್ರಾರ್ಥಿಸುವದಕ್ಕಿಂತ ಹೆಚ್ಚಾಗಿ ಓದುವದರಲ್ಲಿ ನಾನು ಹೆಚ್ಚು ಶಿಕ್ಷಣಪಡೆದದ್ದು ದುಃಖಕರವಾದ ಸಂಗತಿಯಾಗಿದೆ. ನಾನು ಪ್ರಾರ್ಥಿಸುವದಕ್ಕಿಂತ ಹೆಚ್ಚಾಗಿ ಓದುವದರಲ್ಲಿ ನಾನು ಹೆಚ್ಚು ಉತ್ತಮನಾಗಿದ್ದೇನೆ. ಪ್ರಾರ್ಥನೆಯು ಜನರನ್ನು ಬದಲಾಯಿಸುತ್ತದೆ; ಜನರು ಪರಿಸ್ಥಿತಿಗಳನ್ನು ಬದಲಾಯಿಸುತ್ತದೆ. ಯಾರು ಒಂದೇ ಸಮಯದಲ್ಲಿ ಶಪಿಸುವದನ್ನೂ ಪ್ರಾರ್ಥಿಸುವದನ್ನೂ ಮಾಡಬಲ್ಲರು? ಮೈಗಳ್ಳತನವು ನಮ್ಮ ಪ್ರಾರ್ಥನಾ ಜೀವಿತಗಳನ್ನು ಹಾಳು ಮಾಡುವುದು. ಪ್ರಾರ್ಥನೆಯು ತಪ್ಪಿಸಿಕೊಂಡು ಹೋಗುವಿಕೆಯಾಗಿರುವದಿಲ್ಲ - ಅದು ದೇವರನ್ನು ಎದುರಿಸುವುದಾಗಿದೆ. ಯಾಥಾರ್ಥವಾದ ಪ್ರಾರ್ಥನೆಯು ದೇವರ ಮೇಲೆ ನಮ್ಮ ಅವಲಂಬನೆಯ ಅರ್ಹ ಪುರಾವೆಯಾಗಿದೆ.

ಅನ್ಯೋನ್ಯತೆಯು ಕೆಲವೊಂದನ್ನು *ನಮಗೆ* ಮಾಡುತ್ತದೆ. ಬಿನ್ನಹವು *ನಮಗಾಗಿ* ಕೆಲವೊಂದನ್ನು ಮಾಡುತ್ತದೆ; ಪರಾರ್ಥ ವಿಜ್ಞಾಪನೆಯು ನಮ್ಮ *ಮುಖಾಂತರವಾಗಿ* ಕೆಲವೊಂದನ್ನು ಮಾಡುತ್ತದೆ; ಆದರೆ *ನಮಗಾಗಿ* ಮತ್ತು ನಮ್ಮ *ಮುಖಾಂತರ* ಏನಾದರನ್ನು ಮಾಡುವ ಮೊದಲು, ನಮಗಾಗಿ ಏನಾದರೂ ಮಾಡಲ್ಪಡತಕ್ಕದ್ದು! ಪ್ರಾರ್ಥನೆಯ ಉದ್ದೇಶವು ನಮ್ಮ ಚಿತ್ತಕ್ಕೆ ದೇವರ ಚಿತ್ತವನ್ನು ಬಾಗಿಸುವದಿಲ್ಲ, ಆದರೆ ಆತನ ಚಿತ್ತಕ್ಕೆ ನಮ್ಮ ಚಿತ್ತವನ್ನು ಬಾಗಿಸುವುದಾಗಿದೆ. "ದೇವರಿಲ್ಲದೆ, ನಾವು ಮಾಡಲಾರೆವು, ನಾವಿಲ್ಲದೇ, ದೇವರು ಮಾಡಲಾರನು" ಎಂದು ಔಗುಸ್ತೀನನು ಚೆನ್ನಾಗಿ ಹೇಳಿದ್ದಾನೆ.

## ನಮ್ಮ ಸ್ವಂತ ಪ್ರಾರ್ಥನೆಗಳಿಗೆ ನಾವು ಉತ್ತರ ಕೊಡತಕ್ಕದ್ದು

ದೇವರು ಕಾರ್ಯಮಾಡುವದರಿಂದ ಪ್ರಾರ್ಥನೆಯು ಕಾರ್ಯಮಾಡುತ್ತದೆ, *ಆದರೆ ಪ್ರಾರ್ಥನೆಯು ಸಾಕಷ್ಟಾಗಿರುವದಿಲ್ಲ*! ಮತ್ತಾಯ 17:14-21ರಲ್ಲಿ "ಪ್ರಾರ್ಥಿಸು ಮತ್ತು ಉಪವಾಸ ಮಾಡು" ಎಂದು ಯೇಸು ಹೇಳಿದನು. ದೇವರು ಪ್ರಾರ್ಥನೆಗಳಿಗೆ ಉತ್ತರ ಕೊಡುತ್ತಾನೆ, ಆದರೆ ಮನುಷ್ಯನು ಉಪವಾಸಮಾಡುತ್ತಾನೆ. ದೇವರು ನಮ್ಮ ವಿಶ್ವಾಸದ, ಕಾರ್ಯದ ಮತ್ತು ತ್ಯಾಗದ ಕೊರತೆಯಿಂದ ಮಿತಿಗೊಳಿಸಲ್ಪಟ್ಟಿದ್ದಾನೆ. ಪ್ರಾರ್ಥನೆಯು ತನ್ನಷ್ಟಕ್ಕೇ ಸಾಕಷ್ಟಾಗಿರುವದಿಲ್ಲ. ಎಚ್. ಲಿಯೋಬೋಲ್ಸ್ ಎಂಬವನಲ್ಲಿ "ಅನ್‌ಫಿನಿಶ್ಡ ಪ್ರೇಯರ್ಸ್" ಎಂಬ ಶೀರ್ಷಿಕೆಯ ಪ್ರಸಂಗವಿತ್ತು. ಮನುಷ್ಯನು ಮೊದಲು ತನ್ನ ಸ್ವಂತ ಪ್ರಾರ್ಥನೆಗಳಿಗೆ ಉತ್ತರಕೊಡಬೇಕು. ನೀನು ಮಾಡದಿರುವಂಥದ್ದನ್ನು ಮಾಡಲು ಇನ್ನೊಬ್ಬನನ್ನು ಯಾಕೆ ಕೇಳಬೇಕು? ಪ್ರಾರ್ಥಿಸುವುದು ಕೆಲಸ ಮಾಡುವುದಾಗಿದೆ; ಕೆಲಸ ಮಾಡುವುದು ಪ್ರಾರ್ಥಿಸುವುದಾಗಿದೆ. ಪ್ರಾರ್ಥನೆಯು ಕೆಲಸಕ್ಕಾಗಿ, ವಿಚಾರಕ್ಕಾಗಿ ಇಲ್ಲವೇ ಪ್ರೀತಿಗಾಗಿ ಪರ್ಯಾಯವಾಗಿರುವದಿಲ್ಲ. ಹೊಲಗಳ ಮೇಲೆ ಸುಮ್ಮನೇ ಪ್ರಾರ್ಥಿಸುವದರಿಂದ ಅವು ಊಳಲ್ಪಡುವದಿಲ್ಲ. ನಾವು ಒಪ್ಪಿಸಿಕೊಡದ್ದಕ್ಕೆ ನಾವು ಪ್ರಾರ್ಥಿಸಲಾರೆವು. ಪ್ರಾರ್ಥನೆಯು ಬಹಳವಾದದ್ದನ್ನು ಮಾಡುತ್ತದೆ, ಆದರೆ ಪ್ರತಿಯೊಂದನ್ನು ಮಾಡುವದಿಲ್ಲ. ಒಂದು ಕುಟುಂಬವು ನಿರಾಶ್ರಿತವಾಗಿತ್ತು, ಆದುದರಿಂದ ಸಭೆಯು ಪ್ರಾರ್ಥಿಸಲು ಒಂದಾಗಿ ಕೂಡಿ ಬಂದಿತು, ಒಂದು ಫಾರ್ಮಿನ ಬಾಲಕನು ಧಾನ್ಯಗಳ ಒಂದು ಬಂಡೆಯನ್ನು ತಂದನು. "ಪಾ' ನ ಪ್ರಾರ್ಥನೆಗಳನ್ನು ನಾನು ತಂದೆನು" ಎಂದು ಅವನು ಹೇಳಿದನು! ಇಬ್ಬರು ಬಾಲಕರು ಶಾಲೆಗೆ ತಡವಾಗಿ ಬಂದರು. "ನಿಂತುಕೊಂಡು ಪ್ರಾರ್ಥಿಸೋಣ" ಎಂದು ಒಬ್ಬನು ಸೂಚಿಸಿದನು. "ನಾವು ಓದೋಣ ಮತ್ತು ಪ್ರಾರ್ಥಿಸೋಣ" ಎಂದು ಇನ್ನೊಬ್ಬನು ಹೇಳಿದನು. ವಿಧೇಯತೆಯು ನಮ್ಮ ಪ್ರಾರ್ಥನೆಗಳ ಮೇಲೆ "ರೆಕ್ಕೆಗಳನ್ನು" ಹಾಕುತ್ತದೆ. "ನಿನ್ನ ಚಿತ್ತವನ್ನು ನನಗೆ ಬೋಧಿಸು" ಎಂದು ದಾವೀದನು ಹೇಳಲಿಲ್ಲ. "ನಿನ್ನ ಚಿತ್ತವನ್ನು ಮಾಡಲು ನನಗೆ ಬೋಧಿಸು" ಎಂದು

ಅವನು ಹೇಳಿದನು (ಕೀರ್ತನೆ 143:10ಎ; ಒತ್ತಿ ಹೇಳಿದ್ದು ನನ್ನದು).

ಪ್ರಾರ್ಥನೆಯು ವಿಧೇಯತೆಗಾಗಿ ಪರ್ಯಾಯವಾಗಿರುವದಿಲ್ಲ. 1 ಯೋಹಾನ 3:17-24ರಲ್ಲಿ, ದೇವರು ಪ್ರಾರ್ಥನೆಯೊಂದಿಗೆ ವಿಧೇಯತೆಯನ್ನು ಸಂಬಂಧಿಸುತ್ತಾನೆ. ನಾವು ವಿಧೇಯರಾಗುವದರಿಂದ ನಾವು ಸ್ವೀಕರಿಸಿಕೊಳ್ಳುತ್ತೇವೆ. ನಾವು ಮೊದಲು ಕೊಡುವದರಿಂದ ನಾವು ಸ್ವೀಕರಿಸಿಕೊಳ್ಳುತ್ತೇವೆ. ಕೊಡದೇ ಇರುವಂಥವನು, ವಿಪರ್ಯಾಸವಾಗಿ ಸ್ವೀಕರಿಸಿಕೊಳ್ಳಲಾರನು. "ನಮಗೆ ನಿಮ್ಮ ಪ್ರಾರ್ಥನೆಗಳ ಅಗತ್ಯತೆಯಿಲ್ಲವೆಂದು" ಒಬ್ಬ ಮಿಶನರಿಯು ಇತ್ತೀಚೆಗೆ ಕಹಿಯಾಗಿ ಹೇಳಿದನು. ಈ ಸಿಟ್ಟುಗೊಳ್ಳುವಿಕೆಗೆ ಕಾರಣವೇನು? ಹಿರಿಯರೊಂದಿಗೆ ಸಂದರ್ಶನ ಮಾಡುವುದು ಮಿಶನರಿಗಳಿಗೆ ಹೆಚ್ಚು ಅಸಾಧ್ಯವಾಗಿದೆ. ಸಭೆಯ ಮುಂದೆ ಸಂದರ್ಶನ ಹೊಂದುವುದೂ ಅಸಾಧ್ಯವಾಗಿದೆ. ಮಿಶನರಿಗಳಿಗೆ ನಮ್ಮ ಮತ್ತು ನಮ್ಮ ಸಹಾಯದ ಅಗತ್ಯವಿದೆ. ನಾವು ಮಿಶನರಿಗಳನ್ನು ಕೇಳದಿದ್ದರೆ ಇಲ್ಲವೇ ಅವರಿಗೆ ಸಹಾಯ ಮಾಡದಿದ್ದರೆ, ಅವರಿಗೆ ನಮ್ಮ ಪ್ರಾರ್ಥನೆಗಳ ಅವಶ್ಯಕತೆಯಿರುವದಿಲ್ಲ! ಮುಚ್ಚಿದ ಬಾಗಿಲುಗಳು ಮತ್ತು ಪ್ರಾರ್ಥನೆಯು ಮಿಶ್ರಣಗೊ ಳ್ಳುವದಿಲ್ಲ. ನೀವು ಒಬ್ಬ ಮನುಷ್ಯನನ್ನು ಕೇಳದಿದ್ದರೆ, ಅವನಿಗಾಗಿ ಯಾಕೆ ಪ್ರಾರ್ಥಿಸ ಬೇಕು? ನಂಬಿಕೆಯಂತೆ ಪ್ರಾರ್ಥನೆಯು, ಕ್ರಿಯೆಗಳಿಲ್ಲದೇ ಸತ್ತದ್ದಾಗಿದೆ. ದೀನತೆಯಿಂದ ಪ್ರಾರ್ಥಿಸಿರಿ, ಆದರೆ ಅದ್ಭುತಕರವಾಗಿ ಕಾರ್ಯಮಾಡಿರಿ. "ಅಪೇಕ್ಷೆಗಳು ಕುದುರೆಗಳಾದರೆ, ಭಿಕ್ಷುಕರು ಅವುಗಳ ಸವಾರಿಮಾಡುವರು" ಯಶಸ್ವಿ ಪ್ರಾರ್ಥನೆಯು ದೇವರಿಂದ ನಾವು ಎಷ್ಟನ್ನು ಹೊಂದಿಕೊಳ್ಳುವೆವೆಂಬುದಲ್ಲ, ಆದರೆ ನಮ್ಮಿಂದ ಆತನು ಎಷ್ಟನ್ನು ಹೊಂದಿಕೊಳ್ಳುತ್ತಾನೆ ಎಂಬುದಾಗಿರುತ್ತದೆ. ನಮ್ಮ ಉತ್ತಮವಾದದ್ದನ್ನು ದೇವರಿಗೆ ಕೊಡುವವರೆಗೆ ಆತನು ತನ್ನ ಉತ್ತಮವಾದದ್ದನ್ನು ನಮಗೆ ಕೊಡುವದಿಲ್ಲ. ನೀವು ಪ್ರಾರ್ಥಿಸಿದನಂತರ ಸಂಗತಿಗಳಿರಲು, ನೀವು ಪ್ರಾರ್ಥಿಸುವ ಮೊದಲು ಸಂಗತಿಗಳನ್ನು ಮಾಡಿರಿ. ನಿಮ್ಮ ಪ್ರಾರ್ಥನೆಗಳ ಮೇಲೆ "ಪಾದಗಳನ್ನು" ಇಡಿರಿ.

## ಪ್ರಾರ್ಥನೆಯು ಧ್ಯಾನವನ್ನು ಒಳಗೊಂಡಿರುತ್ತದೆ

ನಮಗೆ ಧ್ಯಾನದ ಅಗತ್ಯತೆಯಿದೆ!

> ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು (ಕೀರ್ತನೆ 1:2).
>
> ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ (ಕೀರ್ತನೆ 119:97).
>
> ಈ ಕಾರ್ಯಗಳನ್ನು ಸಾಧಿಸಿಕೊಳ್ಳುವದರಲ್ಲಿ ಆಸಕ್ತನಾಗಿರು. ಇದರಿಂದ ನಿನ್ನ ಅಭಿವೃದ್ಧಿಯು ಎಲ್ಲರಿಗೂ ಪ್ರಸಿದ್ಧವಾಗುವುದು (1 ತಿಮೊಥೆ 4:15).

ಸ್ವಾರ್ಥದ, ಕೆಟ್ಟುಹೋದ, ಶಿಶುಭಾವದ ಸಂಸ್ಕೃತಿಯು ಧ್ಯಾನದೊಳಗೆ ಇರುವದಿಲ್ಲ. ಧ್ಯಾನವು ಹೊರಗೆ ... ಹೊರಗೆ ... ಹೊರಗೆ. ಧ್ಯಾನಕ್ಕೆ ಸಮಯವು ಬೇಕಾಗುತ್ತದೆ (ನಾವು ಬಹಳ ಕಾರ್ಯನಿರತರಾಗಿರುತ್ತೇವೆ) ... ಮೌನತೆಯು (ರೇಡಿಯೊ ಇಲ್ಲವೇ ಟಿ. ವಿಯನ್ನು ನಾವು ಬಂದು ಮಾಡುವದಿಲ್ಲ) ... ವಿಚಾರ (ನಾವು ಭಾವನೆಗಳಲ್ಲಿ ಇರುತ್ತೇವೆ) ... ಏಕಾಂತವಾಸ (ಏಕಾಂತವಾಸ ಒಂದು ಸಂಗತಿ - ಏಕಾಂಗಿತನ

ಇನ್ನೊಂದು ಸಂಗತಿ) ... ಮನಸ್ಸಾಕ್ಷಿ (ನಾವು ಸ್ವ - ಗೌರವದಲ್ಲಿದ್ದೇವೆ) ... ಮತ್ತು ಬದಲಾವಣೆ (ನಾವು ಬಲಿಪಶುಗಳಾಗುತ್ತೇವೆ)! ಪ್ರಾರ್ಥನೆಯು ಜಾಣ್ಣೆಯ ಬೌದ್ಧಿಕ ಉತ್ತರಗಳಾಗಿರುವದಿಲ್ಲ, ಯುಕ್ತಿಗಳಲ್ಲ, ರಹಸ್ಯ ಒಗಟುಗಳಾಗಿರುವದಿಲ್ಲ, ಪ್ರಕಾಶಿಸುವ ನೂತನ ವ್ಯಾಖ್ಯಾನಗಳಾಗಿರುವದಿಲ್ಲ - ಪ್ರಾರ್ಥನೆಯು ದೇವರ ಪ್ರಸನ್ನತೆಯನ್ನು ಆಚರಿಸುವದಾಗಿದೆ!

"ಅದನ್ನು ಮುಗಿಸುವ ವರೆಗೆ ದಿನವನ್ನು ಪ್ರಾರಂಭಿಸಬೇಡಿರಿ!" ದಿನವನ್ನು ದೇವರಿಗೆ ಕೊಡುವದರಿಂದ ಅದನ್ನು ಪ್ರಾರಂಭಿಸಿರಿ. ಕೆಲಸಕ್ಕೆ ಹಾಜರಾಗಿರಿ. ದಿನವೆಲ್ಲಾ ಪ್ರಾರ್ಥಿಸಿರಿ. "ಸ್ತೋತ್ರದ ಬಿಡುವುಗಳು" ಇರಲಿ. ಯೋಗ್ಯ ದೃಷ್ಟಿಕೋನವನ್ನು ಪುನಃ ಹೊಂದಿ ಕೊಳ್ಳಲು ಜೀವನದ ಬೇಡಿಕೆಗಳಿಂದ ನಿಮ್ಮನ್ನು ಬೇರ್ಪಡಿಸಿಕೊಳ್ಳಿರಿ. ಒಬ್ಬರೇ ಇರುವದನ್ನು ಕಲಿತುಕೊಳ್ಳಿರಿ, ಒಬ್ಬರೇ ಆಗಿರುವದನ್ನು ಪ್ರೀತಿಸುವದನ್ನು ಕಲಿತುಕೊಳ್ಳಿರಿ. ಆ ಮೇಲೆ ದೇವರಿಗೆ ನಿಮ್ಮನ್ನು ಸಮರ್ಪಿಸಿಕೊಳ್ಳಿರಿ. ಬೈಬಲಿನ ಮಹಾ ವ್ಯಕ್ತಿಗಳು ಅಗಾಧವಾದ ಧ್ಯಾನದ ಜನರಾಗಿದ್ದರು.

ಧ್ಯಾನಕ್ಕೆ ಪರ್ಯಾಯ ಪದವು ಚಿಂತನ ಎಂಬುದಾಗಿದೆ. ಗ್ರಾಮದ ಬಾಲಕನಾಗಿ, ಆಕಳುಗಳು "ತಮ್ಮ ಮೇವನ್ನು ಜಗಿಯುವದರ" ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಧ್ಯಾನವು "ವಿಚಾರವನ್ನು ಅರಗಿಸಿಕೊಳ್ಳುವುದು" ಆಗಿದೆ. ಧ್ಯಾನವು ಒಂದು "ನೂತನ ವರ್ಷದ ತೀರ್ಮಾನ" ಆಗಿರುವದಿಲ್ಲ. ಅಂದರೆ ಕಠಿಣವಾಗಿ ಪ್ರಯತ್ನಿಸುವುದು ಆಗಿರುವದಿಲ್ಲ. ಧ್ಯಾನವು ನಂಬುವುದಾಗಿದೆ, ಪ್ರಯತ್ನಿಸುವುದು ಆಗಿರುವದಿಲ್ಲ! ಪ್ರಾರ್ಥನೆಯು ಮರಣಕ್ಕಾಗಿ ಪೂರ್ವಾಭಿನಯವಾಗಿರುತ್ತದೆ. ಅದು ಸ್ವಚಿತ್ತದ ಮರಣವೂ ದೇವರ ಆಟವಾಡುವುದೂ ಆಗಿರುತ್ತದೆ. ನಾವು ಪ್ರಾರ್ಥಿಸುವಾಗ ದೇವರ ಸಮಯ ಮತ್ತು ಚಿತ್ತಕ್ಕೆ ಒಪ್ಪಿಕೊಳ್ಳಲು ನಾವು ನಮ್ಮ ಸಮಯಕ್ಕೆ ಮತ್ತು ಚಿತ್ತಕ್ಕೆ ಸಾಯುತ್ತೇವೆ. ಪ್ರಾರ್ಥನೆಯು ಸ್ವಾರ್ಥಕ್ಕೆ ಸಾಯುವುದು ಮತ್ತು ದೇವರಿಗೆ ಬಿಟ್ಟುಕೊಡುವುದು ಆಗಿರುತ್ತದೆ. ಧ್ಯಾನವು ನಮ್ಮನ್ನು ನಮ್ಮ ಜೀವಿತಗಳ ಕೇಂದ್ರಕ್ಕೆ ಹಿಂದಿರುಗುವಂತೆ ಬಿಡುತ್ತದೆ.

ಧ್ಯಾನವು ಮೌನವಾಗಿರುವಂಥದ್ದು ಮತ್ತು ಕೇಳುವಂಥದ್ದು ಆಗಿರುತ್ತದೆ. ಕೇಳುವಂಥದ್ದು ಮಾತಾಡುವಂಥದ್ದರಷ್ಟು ಪ್ರಾರ್ಥನೆಯಾಗಿದೆ. ನಾವು ಬಹಳವಾಗಿ ಮಾತಾಡುತ್ತೇವೆ; ನಾವು ಬಹಳ ಕಡಿಮೆಯಾಗಿ ಕೇಳುತ್ತೇವೆ. ಧ್ಯಾನವು ಮನಸ್ಸನ್ನು ತಟಸ್ಥತೆಯಲ್ಲಿ ಇಡುವದಲ್ಲ - ಧ್ಯಾನವು ಕೇಂದ್ರೀಕರಿಸುವುದು, ಗಮನ ಕೊಡುವುದು ಆಗಿರುತ್ತದೆ. ದೇವರೊಂದಿಗೆ ಮಾತಾಡುವದಕ್ಕಿಂತ ದೇವರು ಮಾತಾಡುವುದನ್ನು ಕೇಳುವುದು ಮಹತ್ವದ್ದಾಗಿದೆ. ನಮ್ಮಲ್ಲಿ ಹೆಚ್ಚಾದವರು ಸಂಭಾಷಣೆಯಲ್ಲಿ ಉತ್ತಮ ರಾಗಿರುವದಿಲ್ಲ - ನಾವು ಮಾತಾಡುವದನ್ನೇ ಮುಂದುವರಿಸುತ್ತೇವೆ. ನಾವು ಒಳ್ಳೆಯ ಕೇಳುಗರೂ ಆಗಿರುವದಿಲ್ಲ. ಕಾದುಕೊಳ್ಳದೇ ಇರುವ ಅನೇಕರು ಪ್ರಾರ್ಥಿಸುವರು. ಪ್ರಾರ್ಥನೆಯಿಂದ ಜ್ಞಾನವು ಬರುತ್ತದೆ (ಯಾಕೋಬ 1:5, 6). ಮಾರ್ಗದರ್ಶನವು ಪ್ರಾರ್ಥನೆಯಿಂದ ಬರುತ್ತದೆ. ಪ್ರಾರ್ಥನೆಯಿಂದ ಬಲವು ಬರುತ್ತದೆ. ಪ್ರಾರ್ಥನೆಯು ನಮ್ಮ ನರಗಳನ್ನು ಮಾನಸಿಕವಾಗಿ ಮಣಿಸುವುದಾಗಿರುವದಕ್ಕಿಂತ ಹೆಚ್ಚಿನದಾಗಿದೆ, ಆತ್ಮೀಕ ವಶೀಕರಣಕ್ಕಿಂತ ಹೆಚ್ಚಿನದಾಗಿದೆ. ಪ್ರಾರ್ಥನೆಯು ದೇವರೊಂದಿಗೆ ಅನ್ಯೋನ್ಯತೆ, ದೇವರೊಂದಿಗೆ ಸಂಬಂಧ, ದೇವರೊಂದಿಗೆ ಸಂವಾದವಾಗಿದೆ, ಧ್ಯಾನವು ಕಳೆದು ಹೋದ ಕಲೆಯಾಗಬಾರದು. ಪ್ರಾರ್ಥನೆಯು ನಾವು ಮಾಡಬಹುದಾದ ಅತೀ ದೊಡ್ಡ ಕಾರ್ಯಾಚರಣೆಯ ಸಂಗತಿಯಾಗಿದೆ.

## ಪ್ರಾರ್ಥನೆಯು ಉಪವಾಸಮಾಡುವದನ್ನು ಒಳಗೊಂಡಿರುತ್ತದೆ

ಉಪವಾಸ ಮಾಡುವದರಲ್ಲಿ ನಾವು ನಂಬುವದಿಲ್ಲ. ನಾವು ನಂಬಿದ್ದರೆ, ಉಪವಾಸ ಮಾಡುವೆವು. ಉಪವಾಸ ಮಾಡುವುದು ಇಂದು ಒಂದು ವಿಲಕ್ಷಣವಾಗಿದೆ. ಒಂದು ಹಿಂದಿನ ಧಾರ್ಮಿಕ ಸ್ಮಾರಕವಾಗಿದೆ. ನಾವು ಹೇಗೆ ಜೀವಿಸುವೆವೋ ಅದು ನಾವು ನಿಜವಾಗಿ ಏನು ನಂಬುವೆವೋ ಅದಾಗಿರುತ್ತದೆ. ಒಬ್ಬನಿಗಿರುವ ಎಲ್ಲಾ ಬೈಬಲ್, ಅವನು ಜೀವಿಸುವ ರೀತಿಯಲ್ಲಿ ಇರುತ್ತದೆ, ಮತ್ತಾಯ 17, ಉಪವಾಸಮಾಡುವದನ್ನು ಬೋಧಿಸುತ್ತದೆ. ಶಿಷ್ಯರು ನಂಬದೇ ಹೋದದ್ದರಿಂದ, ಸೋತುಹೋದರು. ಅವರು ನಂಬಲಿಲ್ಲ, ಇಲ್ಲವೇ ಅವರು ಉಪವಾಸ ಮಾಡಬಹುದಿತ್ತು! ಅವರು ಉಪವಾಸ ಮಾಡದೇ ಇದ್ದುದರಿಂದ, ಅವರ ಪ್ರಾರ್ಥನೆಗಳು ಕುಂಠಿತಗೊಂಡವು. *ನಾವು ಉಪವಾಸ ಮಾಡುವದಿಲ್ಲ!* ಸಹೋದರರು ಅದನ್ನು ಯೋಚಿಸದಷ್ಟು ಬಲಹೀನರೂ ಬಲವಿಲ್ಲದ - ಚಿತ್ತರೂ, ಸುಖಾನುಭವದಿಂದ ದೂಡಲ್ಪಟ್ಟವರೂ ಆಗಿದ್ದಾರೆ! ಉಪವಾಸ ಮಾಡುವುದು ಶತಮಾನಗಳಿಂದಲೇ ಬಿಡಲ್ಪಟ್ಟದ್ದಾಗಿದೆ. 1861 ಮತ್ತು 1964ರ ಮಧ್ಯದಲ್ಲಿ ಈ ವಿಷಯದ ಮೇಲೆ ಯಾವುದೇ ಪ್ರಾಮುಖ್ಯವಾದ ಪುಸ್ತಕವು ಬರೆಯಲ್ಪಡಲಿಲ್ಲ. 1580ರಲ್ಲಿ ಅತ್ಯುತ್ತಮವಾದ ಪುಸ್ತಕವು ಬರೆಯಲ್ಪಟ್ಟಿರುವ ಸಾಧ್ಯತೆಯಿದೆ! ಉಪವಾಸ ಮಾಡದೇ ಸಭೆಯ ಬೆಳವಣಿಗೆಯನ್ನು ನಾವು ಹೇಗೆ ಯೋಚಿಸಬಹುದು?

ಬೈಬಲಿನಲ್ಲಿಯ ಎಲ್ಲಾ ದೊಡ್ಡ ಜನರು ಉಪವಾಸ ಮಾಡಿದರು: ಮೋಶೆ, ಸಮುವೇಲ, ಎಲೀಯ, ದಾವೀದ, ದಾನಿಯೇಲ, ಎಸ್ತೇರಳು, ನೆಹೆಮೀಯ, ಯೋಹಾನ, ಯೇಸು, ಪೌಲ! ಹೊಸ ಒಡಂಬಡಿಕೆಯ ಸಭೆಯು ಉಪವಾಸ ಮಾಡಿತು. ನಿಮಗೆ ಉಪವಾಸಮಾಡುವದಕ್ಕಾಗಿ ಯಾವುದಾದರೊಂದು ಸಾಕಷ್ಟು ಅರ್ಥಮಾಡದಿದ್ದರೆ, ದೇವರಿಗೆ ಯಾಕೆ ತೊಂದರೆಕೊಡುತ್ತೀರಿ? ಪೌಲನು ಬಹಳ ಸಲ ಉಪವಾಸ ಮಾಡಿದನು. ಪೌಲನಂತೆ ನಾವು ದೊಡ್ಡವರಾಗಿರಲು ಬಯಸುತ್ತೇವೆ - ನಾವು ಪೌಲನಂತೆ ಯಾಕೆ ಉಪವಾಸ ಮಾಡಬಾರದು? ಮಿಶನ್ ಕಾರ್ಯವು ಉಪವಾಸ ಮಾಡುವದರೊಂದಿಗೆ ಪ್ರಾರಂಭಿಸಿತು (ಅಪೊಸ್ತಲರ ಕೃತ್ಯಗಳು 13:1, 2). ಹಿರಿಯರು ಉಪವಾಸಮಾಡುವದರೊಂದಿಗೆ ಪ್ರತಿಷ್ಠಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 14:23). ಪ್ರತಿಯೊಂದು ದೊಡ್ಡ ಬಿಕ್ಕಟ್ಟು ಉಪವಾಸ ಮಾಡುವದರಿಂದ ಎದುರಿಸಲ್ಪಡತಕ್ಕದ್ದು.

ಉಪವಾಸಮಾಡುವುದು ಜೀವಿಸಿದ ಪ್ರಾರ್ಥನೆಯಾಗಿರುತ್ತದೆ! ಅದೊಂದು ಕುಶಲ ತಂತ್ರಗಾರಿಕೆಯಲ್ಲ ಇಲ್ಲವೇ ಕೈಚಳಕ ಪ್ರದರ್ಶನವಲ್ಲ. ದೇವರು ಮತ್ತು ನಮ್ಮ ಮಧ್ಯೆ ನಿಲ್ಲುವದಕ್ಕೆ ಯಾವುದನ್ನೂ ಬಿಡಬಾರದು. ಉಪವಾಸ ಮಾಡುವದರಲ್ಲಿ ಕೆಲವೊಂದು ಹೆಚ್ಚು ಉತ್ತಮವಾದದ್ದಕ್ಕಾಗಿ ಕೆಲವೊಂದು ಒಳ್ಳೆಯದನ್ನು ಬಿಟ್ಟುಕೊಡುತ್ತೇವೆ. ಆತ್ಮವು ದೇಹವನ್ನು ನಿಯಂತ್ರಿಸುತ್ತದೆ. ದೇಹಕ್ಕೆ ವ್ಯಾಯಾಮವು ಏನಾಗಿದೆಯೋ ಅದು ಉಪವಾಸ ಮಾಡುವುದು ಪ್ರಾಣಕ್ಕೆ ಆಗಿದೆ. ಪ್ರಾರ್ಥನೆಯು ರೂಢಿಸುವುದಾಗಿದೆ. ಪ್ರಾರ್ಥಿಸಿರಿ! ಪರಿಪೂರ್ಣ ಮಾಡುವಂಥದ್ದು ರೂಢಿ ಮಾಡುವಂಥದ್ದಾಗಿದೆ ಆದರೆ ವಿಚಾರಿಸುವದಾಗಿರುವದಿಲ್ಲ. ಮಾಡುವುದು ಕಲಿಯುವದಾಗಿದೆ. ಕೃತ್ಯವು ಮನೋಭಾವನೆಯನ್ನು ತೀರ್ಮಾನಿಸುತ್ತದೆ. ಸಾಧ್ಯವಾದದ್ದಕ್ಕಾಗಿ ಮತ್ತು ಸಾಧ್ಯವಾಗಿ ಅಸಾಧ್ಯವಾದದ್ದಕ್ಕಾಗಿ ಮತ್ತು ಅಸಾಧ್ಯವಾದದ್ದಕ್ಕಾಗಿ ಪ್ರಾರ್ಥಿಸಿರಿ - ಯಾಕಂದರೆ ದೇವರೊಂದಿಗೆ ಎಲ್ಲಾ ಸಂಗತಿಗಳು ಸಾಧ್ಯವಾಗಿರುತ್ತವೆ!

## ಪ್ರಾರ್ಥನೆಯು ಆಗ್ರಹವಾಗಿದೆ (ಸತತ ಪ್ರಯತ್ನ)

ಸಾಮ್ಯಗಳು "ಜಗತ್ತನ್ನು ಬುಡಮೇಲು ಮಾಡುತ್ತವೆ." ಅವು ನಮ್ಮನ್ನು ಆಘಾತಗೊಳಿಸುತ್ತವೆ. "ಬೇಸರಗೊಳ್ಳದೇ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬುದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು" ಎಂದು ಲೂಕ 18 ಪ್ರಾರಂಭವಾಗುತ್ತದೆ. ಇದು "ಅನ್ಯಾಯಗಾರನಾದ ನ್ಯಾಯಾಧಿಪತಿ" ಎಂದು ತಿಳಿಯಲ್ಪಡುವ ಸಾಮ್ಯದ ಪ್ರಾರಂಭದಲ್ಲಿದೆ. ನ್ಯಾಯದ ವಿಚಾರಣೆಯ ವಿಷಯದೊಂದಿಗೆ ಇದ್ದ ಹಟಮಾರಿ ವಿಧವೆಯ ಬಗ್ಗೆ ಯೇಸು ಹೇಳಿದನು. ದೇವರಿಗಾಗಲೀ ಇಲ್ಲವೇ ಮನುಷ್ಯನಿಗಾಗಲೀ ಹೆದರದ ನ್ಯಾಯಾಧಿಪತಿಯು ಒಪ್ಪಿಕೊಂಡನು, "ಈ ವಿಧವೆ ನನ್ನನ್ನು ಕಾಡುತ್ತಾ ಬರುವದರಿಂದ ಆಕೆಯ ನ್ಯಾಯವನ್ನು ವಿಚಾರಿಸಿ ತೀರ್ಪು ಮಾಡುವೆನು" ಎಂದು ಹೇಳಿದನು (ಲೂಕ 18:5). ಯೇಸುವು ದೇವರನ್ನು ಅನ್ಯಾಯಗಾರನಾದ ನ್ಯಾಯಾಧಿಪತಿಗೆ ಹೋಲಿಸಲಿಲ್ಲ. ಸತತವಾಗಿ ಪೀಡಿಸುತ್ತಿದ್ದ ವಿಧವೆಯಂತೆ ಇರಬೇಕೆಂದು ನಮ್ಮನ್ನು ಆತನು ಒತ್ತಾಯ ಮಾಡುತ್ತಿದ್ದನು ಸತತ ಪ್ರಯತ್ನಿಸುವಿಕೆಯ ಸ್ಥಾನವನ್ನು ಭೂಮಿಯ ಮೇಲೆ ಯಾವುದೂ ತೆಗೆದುಕೊಳ್ಳುವದಿಲ್ಲ. ತಲಾಂತು, ಸಾಮರ್ಥ್ಯ, ಪ್ರತಿಭೆ ತೆಗೆದುಕೊಳ್ಳಲಾರವು. ಸಮಸ್ಯೆಯು ದೇವರಾಗಿರುವದಿಲ್ಲ - ಸಮಸ್ಯೆಯು ನಮ್ಮೊಂದಿಗಿರುತ್ತದೆ. ಪ್ರಾರ್ಥನೆ ಮಾಡಬೇಕೆಂಬ ಮನಸ್ಸು ಇಲ್ಲದಾಗಲೂ ಪ್ರಾರ್ಥನೆ ಮಾಡಿರಿ. ನೀವು ಪ್ರಾರ್ಥಿಸುವವರೆಗೆ ಪ್ರಾರ್ಥಿಸಿರಿ. ನಾವು ತಪ್ಪುತ್ತಲೇ ಯಾಕೆ ಇರಬೇಕು? ಉತ್ತರಕ್ಕಾಗಿ "ನಾವು 'ಇಲ್ಲ' ಎಂಬುದನ್ನು ಯಾಕೆ ತೆಗೆದುಕೊಳ್ಳಬೇಕು"?

ಯೇಸುವು ಈ ಸಾಮ್ಯವನ್ನು ಆತ್ಮವಿಮರ್ಶೆಯ ಯೋಚನೆಯೊಂದಿಗೆ ಮುಕ್ತಾಯಗೊಳಿಸಿದನು: "ಹೀಗಿದ್ದರೂ ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ?" (ಲೂಕ 18:8).

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬುವದಿಲ್ಲ,***
***ನಾನು ನಿನ್ನಲ್ಲಿ ನಂಬುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

ಟಿಪ್ಪಣಿಗಳು

[1]ಇಗ್ನಾಸ್ ಪಾಡೆರೆವ್‌ಸ್ಕಿಯು ಪ್ರಸಿದ್ಧ ಪೋಲಿಶ್ ಕಾನ್ಸರ್ಟ್ ಪಿಯಾನಿಸ್ಟ ಆಗಿದ್ದನು (1860-1941). [2]Autosuggestion ಎಂಬುದು ಒಬ್ಬ ವ್ಯಕ್ತಿಯು ಒಂದು ಅಭಿಪ್ರಾಯವನ್ನು ನಂಬಿಕೆಯನ್ನು ಇಲ್ಲವೇ ಕಾರ್ಯದ ಯೋಜನೆಯನ್ನು ತಾನೇ ಸ್ವೀಕರಿಸುವದರ ವಿಧಾನವಾಗಿದೆ.

© 2009 Truth for Today